ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಅಧ್ಯಕ್ಷರೇ ಆ ಯೋಚನೆ ಸರ್ಕಾರಕ್ಕೆ ಇಲ್ಲ. ನಾವು ಅವರಿಗೆ ತರಬೇತಿಯನ್ನು ಕೊಡುವಂತಹ ಸಂದರ್ಭದಲ್ಲಿ ಪಠ್ಯಪುಸ್ತಕದಲ್ಲಿ ಇರುವಂತೆ ಆಳವಡಿಸಿದ್ದೇವೆ. ಸರ್ಕಾರಕ್ಕೆ ಸುಮಾರು ೩೨ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ನಾವು ಈಗಾಗಲೇ ಸುಮಾರು ೨-೩ ಲಕ್ಷ ರೂಪಾಯಿಗಳ ಹಣವನ್ನು ಕೊಟ್ಟಿದ್ದೇವೆ. ಇದನ್ನು ಜಾರಿಗೆ ತರುವ ಯೋಚನೆ ಸರ್ಕಾರಕ್ಕೆ ಇಲ್ಲ.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೇ ಈ ವಿಷಯದಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಡೈರೆಕ್ಷನ್ಸ್ ಸಹ ಇದೆ. ಹಾಗೆ ಇದ್ದರೂ ಸಹ ಇದನ್ನು ತಾವು ಏತಕ್ಕೆ ತೆಗೆದುಕೊಳ್ಳಬಾರದು.? ಇದರ ಬಗ್ಗೆ ಮೊನ್ನೆ ಲೋಕಸಭೆಯಲ್ಲಿ ಚರ್ಚೆ ಮಾಡಿದ್ದಾರೆ. ಆದ್ದರಿಂದ ಇದರ ಬಗ್ಗೆ ತಮ್ಮ ಷಿಚಿತ ವಾದಂತಹ ಅಭಿಪ್ರಾಯ ಏನು?

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಅಧ್ಯಕ್ಷರೇ ಈ ವಿಷಯವನ್ನು ಪ್ರಿಶಿಕ್ಷಣ ಕ್ಷೇತ್ರದಲ್ಲಿ ಆಳವಡಿಸ ಬೇಕೆಂದು ಏನೂ ಇಲ್ಲ. ಇದನ್ನು ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಹಾಗೂ ತರಬೇತಿ ಸಂಸ್ಥೆಗಳಲ್ಲಿ ಅಭ್ಯಾಸ ಮಾಡಬೇಕೆಂದು ಇದೆ. ಆದರೆ ಇದಕ್ಕೆ ಕೇಂದ್ರ ಸರ್ಕಾರದಿಂದ ನಮ್ಮ ರಾಜ್ಯಸರ್ಕಾರಕ್ಕೆ ಸುಮಾರು ೩೨ ಲಕ್ಷ ರೂಪಾಯಿಗಳ ಹಣವನ್ನು ಕೊಟ್ಟಿದ್ದಾರೆ. ಆದರೆ ಮಾನ್ಯ ಸದಸ್ಯರು ಹೇಳಿದಂತಹ ರೀತಿಯಲ್ಲಿ ನಮ್ಮ ಸರ್ಕಾರಕ್ಕೆ ಆ ಯೋಚನೆ ಇಲ್ಲ. ಮತ್ತು ಆ ಉದ್ದೇಶ ಕೂಡ ಇಲ್ಲ.

Enforcement of Agricultural Produce Marketing (Regulation) Act

1103. SRI K.B. SHIVAIAH (Nanjangud).—Will the Minister of State for Marketing and Muzrai be pleased to state:—

(a) the date from which the Karnataka Agricultural Produce Marketing (Regulation) Act, has come into force in Nanjangud taluk;

(b) whether the construction of Market Yards have been constructed and whether the business place has been shifted to the new Market Yard ;

(c) if so, the nature of facilities provided by the Marketing Committee to the ryots who come to the Market?

SRI SUDHEENDRA RAO KASBE (Minister of State for Marketing and Muzrai).—

(a) The Act has been brought into force from 1st June, 1954.

(b) Market Yard had been constructed and business place relating to the Cattle has been shifted there.

(c) The following facilities have already been provided to the ryots in the Market Yard:

1. Sheds to Cattle, Goat and Sheep.
2. Auction Yards.
3. Pump House and Water Supply arrangements.
4. Water tanks to live-stock and Goats, Sheeps.
5. Drainage system and sanitary blocks.
6. Electricity supply to Pump House and Godowns.

7. S.F.D.A. Godowns.

8. Shelter trees.

9. Barbed wire fencing and gates.

ಶ್ರೀ ಕೆ.ಬಿ. ಶಿವಯ್ಯ.—ಮಾನ್ಯ ಅಧ್ಯಕ್ಷರೇ ನಾನು ಕೇಳಿದ (ಅ) ಪ್ರಶ್ನೆಗೆ ಉತ್ತರವಾಗಿ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ೧ನೇ ಜೂನ್ ೧೯೫೪ಳನೇ ಇಸವಿಯಿಂದ ಜಾರಿಗೆ ತರಲಾಯಿತು ಎಂದು ಹೇಳಿದ್ದಾರೆ. ಆಂದರೆ ಸುಮಾರು ೨೮ ವರ್ಷಗಳಾಗಿದೆ. ಅಲ್ಲಿಂದ ಇಲ್ಲಿಯವರಿಗೆ ಎಷ್ಟು ಹಣವನ್ನು ಸರ್ಕಾರದವರು ವಸೂಲು ಮಾಡಿದ್ದಾರೆ? ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಸುಧೀಂದ್ರರಾವ್ ಕಸಬೆ.—ಮಾನ್ಯ ಅಧ್ಯಕ್ಷರೇ ಬೇಕಾದರೆ ೧೯೭೮–೭೯ನೇ ಸಾಲಿನಲ್ಲಿ ವಸೂಲಾಗಿರುವಂತಹದ್ದನ್ನು ನಾನು ಹೇಳುತ್ತೇನೆ. ಅಂದರೆ ೭೮–೭೯ರಲ್ಲಿ ೧,೯೭,೦೦೦ ರೂಪಾಯಿಗಳಾಗಿದೆ. ಮತ್ತೆ ೧೯೭೯–೮೦ನೇ ಸಾಲಿನಲ್ಲಿ ೨,೪೨,೦೦೦ ರೂ. ಮತ್ತೆ ೧೯೮೦–೮೧ನೇ ಸಾಲಿನಲ್ಲಿ ಸುಮಾರು ೩,೬೮,೦೦೦ ರೂಪಾಯಿಗಳು ಮತ್ತೆ ೧೯೮೧–೮೨ನೇ ಸಾಲಿನಲ್ಲಿ ಸುಮಾರು ೫ ಲಕ್ಷ ರೂಪಾಯಿಗಳು.

ಶ್ರೀ ಕೆ.ಬಿ. ಶಿವಯ್ಯ.—ಮಾನ್ಯ ಅಧ್ಯಕ್ಷರೇ ನನ್ನ ಆ ಪ್ರಶ್ನೆಯ ಉತ್ತರವಾಗಿ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಮಾರುಕಟ್ಟೆಯ ಪ್ರಾಂಗಣವನ್ನು ನಿರ್ಮಾಣ ಮಾಡಿ ಅಲ್ಲಿಗೆ ಜಾನುವಾರಗಳ ವ್ಯಾಪಾರವನ್ನು ಮಾತ್ರ ಸ್ಥಳಾಂತರಿಸಲಾಗಿದೆ ಎಂದು, ಆವರೆ ಯಾವ ವರ್ಷ, ಯಾವ ತಿಂಗಳು, ಮತ್ತು ಯಾವ ದಿನ ಸ್ಥಳಾಂತರಿಸಲಾಯಿತು? ಅಲ್ಲಿ ವ್ಯಾಪಾರವನ್ನು ಮಾಡಲು ಎಲ್ಲಾ ವಿಧವಾದಂತಹ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗಿದೆಯೇ. ?

ಶ್ರೀ ಸುಧೀಂದ್ರರಾವ್ ಕಸಬೆ.—ಮಾನ್ಯ ಅಧ್ಯಕ್ಷರೇ ಚಾಮರಾಜನಗರದಲ್ಲಿ ಈಗ ಮೂರು ರೆಗ್ಯುಲರ್ ಮಾರ್ಕೆಟ್ಸ್ ಇವೆ. ಮತ್ತೇ ಕೆಲವು ಕಡೆಗಳಲ್ಲಿ ಸುಮಾರು ೧೦ ಲಕ್ಷ ರೂಪಾಯಿಗಳ ಯೋಜನೆಯಲ್ಲಿ ಈ ರೆಗ್ಯುಲೇಟೆಡ್ ಮಾರ್ಕೆಟ್ಸ್‌ಗಳನ್ನು ಕಟ್ಟಿಸಿಕೊಡುವ ಕಾರ್ಯಕ್ರಮವನ್ನು ಸಹ ಹಾಕಿಕೊಳ್ಳುತ್ತೇವೆ.

ಶ್ರೀ ಕೆ.ಬಿ. ಶಿವಯ್ಯ.—ಈಗ ತಾವು ಕಟ್ಟಿಸಿಕೊಟ್ಟಿರುವ ರೆಗ್ಯುಲೇಟೆಡ್ ಮಾರ್ಕೆಟ್‌ಗಳಲ್ಲಿ ಯಾವ ವಿಧವಾದಂಥ ಸೌಲಭ್ಯಗಳನ್ನು ಕಲ್ಪಿಸಿ ಕೊಟ್ಟಿಲ್ಲ. ಆದ್ದರಿಂದ ಅಲ್ಲಿ ಎಲ್ಲಾ ರೀತಿಯ ಸೌಲಭ್ಯಗಳನ್ನು ಕಲ್ಪಿಸಿಕೊಡುವುದಕ್ಕೆ ಸರ್ಕಾರದವರು ಏನಾದರೂ ಯೋಚನೆ ಮಾಡಿದ್ದೀರಾ.

ಶ್ರೀ ಸುಧೀಂದ್ರರಾವ್ ಕಸಬೆ.—ಮಾನ್ಯ ಅಧ್ಯಕ್ಷರೇ ನಾನು ಈಗಾಗಲೆ ಹೇಳಿದ ಹಾಗೆ ಸುಮಾರು ೧೦ ಲಕ್ಷ ರೂಪಾಯಿಗಳ ಯೋಜನೆಯೊಂದನ್ನು ಸರ್ಕಾರ ಹಾಕಿಕೊಂಡಿದೆ. ಆದಷ್ಟು ಬೇಗ ಈ ರೆಗ್ಯುಲೇಟೆಡ್ ಮಾರ್ಕೆಟ್ಸ್‌ಗಳಿಗೆ ಬೇಕಾದಂತಹ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಡುವಂತೆ ಏರ್ಪಾಡು ಮಾಡಲಾಗುವುದು.

ಶ್ರೀ ಎಲ್.ಟಿ. ತಿಮ್ಮಪ್ಪ ಹೆಗ್ಗಡೆ.—ಮಾನ್ಯ ಅಧ್ಯಕ್ಷರೇ ಕೆಲವು ಕಡೆಗಳಲ್ಲಿ ಈ ರೆಗ್ಯುಲೇಟೆಡ್ ಮಾರ್ಕೆಟ್‌ಗಳ ಕಟ್ಟಡಗಳು ಪ್ರಾರಂಭ ಮಾಡಿದ್ದು ಕೆಲವು ಪೂರ್ತಿಯಾಗಿವೆ. ಮತ್ತೆ ಕೆಲವು ಅರ್ಧಂಬರ್ದ ಕೆಲಸವಾಗಿ ಹಾಗೆಯೇ ನಿಂತಿವೆ. ಆದ್ದರಿಂದ ಪೂರ್ತಿಯಾಗಿ ಕೆಲಸವಾಗದೆ ಉಳಿದಿರುವಂತಹ ಕಟ್ಟಡಗಳನ್ನು ಪೂರ್ತಿ ಮಾಡುವುದಕ್ಕೆ ಸರ್ಕಾರದವರು ಏನಾದರೂ ಕ್ರಮ ಕೈಗೊಳ್ಳುತ್ತೀರಾ?

ಶ್ರೀ ಸುಧೀಂದ್ರರಾವ್ ಕಸಬೆ.—ಮಾನ್ಯ ಅಧ್ಯಕ್ಷರೇ ಈಗಾಗಲೇ ಸುಮಾರು ೧೯ ಮಾರ್ಕೆಟ್‌ಗಳನ್ನು ನಾವು ಶಿಫ್ಟ್ ಮಾಡಿದ್ದೇವೆ. ಇನ್ನು ಕೆಲವು ಮಾರ್ಕೆಟ್ಸ್‌ಗಳಲ್ಲಿ ಕೆಲಸವಾಗದೆ ನಿಂತಿವೆ ಎಂದು ಮಾನ್ಯ ಸದಸ್ಯರು ಹೇಳಿದರು ಅದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡು ಕೆಲಸ ಪೂರ್ತಿ ಮಾಡುತ್ತದೆ.